# ಕನ್ನಡ ಪೋಸ್ಟ್

ಹಾಸನ

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 83 | Pages. 2 | Date: 28-02-2026, SATURDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 83 - ಪುಟಗಳು : 2 28-02-2026 ಶನಿವಾರ Ph: 8762954248 ದರ : ₹1


# ಕಾರ್ಮಿಕ ಇಲಾಖೆಯ ಸೌಲಭ್ಯ ಅರ್ಹರಿಗೆ ತಲುಪಲಿ

## ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದಿಂದ ಸಾಧಕರಿಗೆ ಸನ್ಮಾನ | ಅಧಿಕಾರಿಗಳಿಂದ ಮಾಹಿತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಅಸಂಘಟಿತ ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರ ಹತ್ತು ಹಲವು ಯೋಜನೆ ಜಾರಿಗೊಳಿಸಿದ್ದು, ಅರ್ಹ ಫಲಾನುಭವಿಗಳಿಗೆ ತಲುಪಬೇಕು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್.ಯಮುನಾ ಸಲಹೆ ನೀಡಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದಿಂದ ಏರ್ಪಡಿಸಿದ್ದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜನ್ಮ ದಿನಾಚರಣೆ, ಕಾರ್ಮಿಕರಿಗೆ ಆರೋಗ್ಯ ತಪಾಸಣೆ, ಕಿಟ್ ವಿತರಣೆ ಹಾಗೂ ಇ-ಶ್ರಮ್‌ಗೆ ನೋಂದಣಿ ಅಭಿಯಾನ, ವಿವಿಧ ಕ್ಷೇತ್ರ ಸಾಧಕರಿಗೆ ಸನ್ಮಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ಕೇಂದ್ರ ಸರ್ಕಾರ ಇ-ಶ್ರಮ್, ಪಿಎಂಎಸ್‌ವೈ ಯೋಜನೆ ಜಾರಿಗೊಳಿಸಿದ್ದು, ನೋಂದಣಿಯಾಗುವ ಮೂಲಕ ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ಅಸಂಘಟಿತ ಕಾರ್ಮಿಕರು ಅಧಿಕೃತವಾಗಿ ನೋಂದಣಿ ಮಾಡಿಸಿಕೊಂಡಿರಬೇಕೆಂಬ ಉದ್ದೇಶದಿಂದ 2021ರಲ್ಲಿ ಕೇಂದ್ರ ಸರ್ಕಾರ ಇ-ಶ್ರಮ್ ಸದಸ್ಯತ್ವ ಆರಂಭಿಸಿದೆ. ಯಾವುದೇ ಸರ್ಕಾರ ಕಾರ್ಮಿಕರಿಗೆ ಸವಲತ್ತು ಕಲ್ಪಿಸಬೇಕೆಂದರೆ ನಿಖರ ಮಾಹಿತಿ ಬೇಕಾಗುತ್ತದೆ.



ಅದಕ್ಕಾಗಿ ಅಭಿಯಾನ ಆರಂಭಿಸಿದ್ದು ಕಡ್ಡಾಯವಾಗಿ ಸದಸ್ಯತ್ವ ಪಡೆಯಬೇಕು ಎಂದರು.

### ನಿವೃತ್ತಿ ಬಳಿಕ ಯೋಜನೆ ಲಾಭ

18 ರಿಂದ 40 ವರ್ಷದೊಳಗಿನ ಕಾರ್ಮಿಕರಿಗೆ ಪಿಎಂಎಸ್‌ವೈ ಯೋಜನೆ ಜಾರಿಗೊಳಿಸಿದ್ದು, 18 ವರ್ಷದವರು ತಿಂಗಳಿಗೆ 55 ರೂ. ಹಾಗೂ 40 ವರ್ಷದವರು 100 ರೂ. ವಂತಿಗೆ ಪಾವತಿಸಬೇಕು. ನೀವು ಕಟ್ಟಿದ ಹಣಕ್ಕೆ ಕೇಂದ್ರ ಸರ್ಕಾರ ಸಮಾನ ಹಣ ಕಟ್ಟುತ್ತದೆ. ಅದಕ್ಕಾಗಿ ಪ್ರತ್ಯೇಕ ಖಾತೆ ತೆರೆಯಲಾಗುತ್ತದೆ. ವ್ಯಕ್ತಿಗೆ 60 ವರ್ಷ ಆದ ಬಳಿಕ ತಿಂಗಳಿಗೆ 3 ಸಾವಿರ ರೂ. ಪಿಂಚಣಿ ದೊರೆಯಯುತ್ತದೆ. ಯೋಜನೆ ಶುರು ಮಾಡಿದ ಮೇಲೆ ಮುಂದುವರಿಸಲು ಸಾಧ್ಯವಾಗದಿದ್ದರೆ ಕಟ್ಟಿರುವ ಹಣಕ್ಕೆ ಬಡ್ಡಿ ಸೇರಿಸಿ ಕೊಡಲಾಗುತ್ತದೆ. ಭವಿಷ್ಯದ ದೃಷ್ಟಿಯಿಂದ ಈ ಯೋಜನೆ ಉತ್ತಮವಾಗಿದ್ದು ಎಲ್ಲರೂ ನೋಂದಣಿ ಮಾಡಬೇಕು ಎಂದರು.

ಕಾರ್ಮಿಕರ ಸಚಿವ ಸಂತೋಷ್ ಲಾಡ್ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಪ್ರತಿಯೊಬ್ಬ ಅರ್ಹರನ್ನು ಇಲಾಖೆ ಯೋಜನೆಗೆ ಸೇರಿಸಬೇಕೆಂದು ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಅನುದಾನ ಕ್ರೋಢೀಕರಿಸಲು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಜಿಲ್ಲಾ ಪತ್ರಕರ್ತರ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಭಾರತದಲ್ಲಿ ಕಾರ್ಮಿಕರಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ರಾಜ್ಯದಲ್ಲಿ 60 ಸಾವಿರ ಕೋಟಿ ರೂ. ಕಾರ್ಮಿಕ ನಿಧಿ ಇದ್ದು, ಆ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಲಾಗದಂತೆ ಕಾನೂನು ಬಿಗಿಗೊಳಿಸಲಾಗಿದೆ. ಹೀಗಾಗಿ ಕಾರ್ಮಿಕ ಇಲಾಖೆ ಸದೃಢವಾಗಿದೆ ಎಂದರು.

ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ರೈತರು ಮತ್ತು ಕಾರ್ಮಿಕರು ಪ್ರಮುಖ ಪಾತ್ರ ವಹಿಸುತ್ತಾರೆ. ಜಿಲ್ಲೆಯ ಕಾರ್ಮಿಕರು ದಕ್ಷತೆಯಿಂದ ಕೆಲಸ ಮಾಡುವ ಮೂಲಕ ಸರ್ಕಾರದ ಸವಲತ್ತುಗಳನ್ನು ಪಡೆಯಬೇಕು. ಇಲ್ಲಿನ ಅಧಿಕಾರಿಗಳು ಸಹ ವಿವಿಧ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದ್ದಾರೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಪರಿಸರ ಇಂಜಿನಿಯರ್ ಕವಿತಾ, ವೇದ ಭಾರತಿ ಸಂಯೋಜಕ ಹರಿಹರಪುರ ಶ್ರೀಧರ್, ಪತ್ರಕರ್ತ ನಾಗರಾಜ್ ಹೆತ್ತೂರು ಮಾತನಾಡಿದರು. ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕಾಂಚನಮಾಲಾ, ಕಾರ್ಮಿಕ ಹೋರಾಟಗಾರರಾದ ಸ್ವಾಮಿ, ರಾಮೇಗೌಡ, ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ಅಧ್ಯಕ್ಷ ಆನಂದ್ ಮತ್ತಿತರರಿದ್ದರು.

# ಸಿಎಸ್‌ಆರ್ ನಿಧಿಯಡಿ ತ್ರಿಚಕ್ರ ವಾಹನ ವಿತರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸಾರಿಗೆ ಇಲಾಖೆ ಹಾಗೂ ವಿವಿಧ ಕೈಗಾರಿಕೆಗಳ ಸಹಯೋಗದಲ್ಲಿ ಶುಕ್ರವಾರ ಜಿಲ್ಲೆಯ ಏಳು ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಸಮಾರಂಭವನ್ನು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಅವರು ಫಲಾನುಭವಿಗಳಿಗೆ ಕೀ ವಿತರಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ವಿಕಲಚೇತನರ ಅನುಕೂಲಕ್ಕಾಗಿ ಸರ್ಕಾರ ಹತ್ತು ಹಲವು ಯೋಜನೆ ಜಾರಿಗೊಳಿಸಿದೆ. ಸಿಎಸ್‌ಆರ್ ನಿಧಿಯಡಿ ಕಾರ್ಖಾನೆಗಳು ಸಹ ನೆರವು ನೀಡುತ್ತಿವೆ. ಫಲಾನುಭವಿಗಳು ಸರ್ಕಾರಿ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ದುರುಪಯೋಗ ಮಾಡಿದರೆ ಉದ್ದೇಶವೇ ಹಾಳಾಗುತ್ತದೆ ಎಂದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್.ಯಮುನಾ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಹಿಮತ್ ಸಿಂಗ್ ಕಾ ಲಿನೆನ್ಸ್‌ನ ಗುರುರಾಜ್, ಅರಕಲಗೂಡಿನ ಸುನಂದ ಫೀಡ್ಸ್ ವೀರೇಂದ್ರ, ಅರವಿಂದ ಗಾರ್ಮೆಂಟ್ಸ್‌ನ ಬಾಲರಾಜು, ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಕೆರೆಯಲ್ಲಿ ವ್ಯಕ್ತಿ ಶವ ಪತ್ತೆ ಸ್ನೇಹಿತರಿಂದಲೇ ಕೊಲೆ ಶಂಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಅಂತನಹಳ್ಳಿ ಗ್ರಾಮದಲ್ಲಿ ವ್ಯಕ್ತಿಯೊಬ್ಬ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು ಸಾಲ ಮರುಪಾವತಿ ಮಾಡದ್ದಕ್ಕೆ ಸ್ನೇಹಿತರೇ ಹತ್ಯೆಗೈದಿದ್ದಾರೆಂಬ ಆರೋಪ ಕೇಳಿಬಂದಿದೆ.

ಗ್ರಾಮದ ಜಗದೀಶ್ (42) ಮೃತ ವ್ಯಕ್ತಿ. ಜೊತೆಯಲ್ಲಿ ಕರೆದುಕೊಂಡು ಹೋದ ಸ್ನೇಹಿತರೇ ಕಂಠಪೂರ್ತಿ ಕುಡಿಸಿ ನಂತರ ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಮೃತ ಜಗದೀಶ್ ಗುರುವಾರ ಮನೆಯಲ್ಲಿಯೇ ಇದ್ದರು. ಬಸವ, ಮಂಜೇಗೌಡ ಮೊದಲಾದವರು ಮನೆ ಬಳಿ ಬಂದು ಜಗದೀಶ್‌ನನ್ನು ಕರೆದುಕೊಂಡು ಹೋಗಿದ್ದರು. ನಂತರ ಮಲ್ಲನಘಟ್ಟ ಗ್ರಾಮದ ಬಳಿ ಬಸವ, ಮಂಜೇಗೌಡ ಜೊತೆಯಲ್ಲಿ ಸೋಮಶೇಖರ್, ದಿಲೀಪ್ ಎಲ್ಲರೂ ಸೇರಿ ಪಾರ್ಟಿ ಮಾಡಿದ್ದಾರೆ.

ಸಂಜೆ ಜಗದೀಶ್ ಸಹೋದರ ರವಿಗೆ ಕರೆ ಮಾಡಿದ ಗುಂಪಿನಲ್ಲಿದ್ದ ಬಸವ ಎಂಬಾತ ನಿಮ್ಮ ಅಣ್ಣ ಜಗದೀಶ್ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ ಎಂದು ತಿಳಿಸಿದ್ದಾನೆ.

ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕೆರೆಯಲ್ಲಿ ಶೋಧಕಾರ್ಯ ನಡೆಸಿ ಮೃತದೇಹವನ್ನು ಹೊರ ತೆಗೆದರು. ಜಗದೀಶ್ ಸಾಲ ಪಡೆದ ಹಣವನ್ನು ವಾಪಸ್ ಕೊಟ್ಟಿಲ್ಲ ಎಂಬ ಕಾರಣಕ್ಕೆ ಸ್ನೇಹಿತರೇ ಜಗಳ ತೆಗೆದು ಅದು ವಿಕೋಪಕ್ಕೆ ಹೋಗಿ ಸಮೀಪದ ಕೆರೆಗೆ ತಳ್ಳಿ ಕೊಲೆ ಮಾಡಿದ್ದಾರೆ ಎಂದು ಜಗದೀಶ್ ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

# ಅಭಿವೃದ್ಧಿ ಸಹಿಸದೆ ಶಾಸಕರ ವಿರುದ್ಧ ವೃಥಾ ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಬೇಲೂರು: ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸಿಕೊಳ್ಳಲಾಗದೆ ರಾಜಕೀಯ ಪ್ರೇರಿತ ಆರೋಪಗಳನ್ನು ಕಾಂಗ್ರೆಸ್ ಮುಖಂಡರು ಮಾಡುತ್ತಿದ್ದಾರೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪರ್ವತಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಈ ಹಿಂದೆ ನಡೆದ ಗ್ರಾಮ ಪಂಚಾಯಿತಿ ಸದಸ್ಯರ ಸ್ನೇಹ ಸಮ್ಮಿಲನ ಕಾರ್ಯಕ್ರಮಕ್ಕೆ ಅಧಿಕಾರಿಗಳು ಭಾಗವಹಿಸಿದರೆ ಪ್ರತಿಭಟಿಸುವುದಾಗಿ ಕಾಂಗ್ರೆಸ್ ಮುಖಂಡರು ಎಚ್ಚರಿಸಿದ್ದರು. ಆದರೆ ಎಚ್ಚರಿಸಿದವರು ಪ್ರತಿಭಟಿಸುವುದಕ್ಕೆ ಏಕೆ ಬರಲಿಲ್ಲ ಎಂದು ಪ್ರಶ್ನೆ ಮಾಡಿದ್ದಲ್ಲದೆ ಶಾಸಕರು ತಮ್ಮ ಸ್ವಂತ ಹಣದಿಂದ ಕಾರ್ಯಕ್ರಮವನ್ನು ಮಾಡಿ ಬಂದಂತ ಸದಸ್ಯರು ಮತ್ತು ಶಾಸಕರ ಬೆಂಬಲಿಗರಿಗೆ ಸಂತೋಷಪಡಿಸಿರುವುದನ್ನ ನೋಡಲಾಗಿದೆ. ಇವರು ಶಾಸಕರಂತೆ ತಮ್ಮ ಸ್ವಂತ ಹಣದಿಂದ ಕಾರ್ಯಕ್ರಮವನ್ನು ಮಾಡಿ ತೋರಿಸಲಿ ನೋಡೋಣ ಎಂದು ಸವಾಲೆಸೆದರು.

ವಿರೋಧ ಪಕ್ಷದಲ್ಲಿದ್ದರೂ ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಸಚಿವರನ್ನು ಭೇಟಿಯಾಗಿ ಕ್ಷೇತ್ರದ ಸಮಸ್ಯೆಗಳನ್ನು ಮನವರಿಕೆ ಮಾಡಿ, ವಿವಿಧ ಯೋಜನೆಗಳಿಗೆ ಅನುದಾನ ತರಲಾಗಿದೆ. ಪಟ್ಟಣದ 23 ವಾರ್ಡ್‌ಗಳ ಪೈಕಿ ಹಲವು ವಾಡ್‌ಗಳ ಅಭಿವೃದ್ಧಿಗಾಗಿ 9.5 ಕೋಟಿ ರೂಪಾಯಿಗೂ ಹೆಚ್ಚು ಅನುದಾನ ಮಂಜೂರಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ವಿವರಿಸಿದರು.

ಗ್ರಾಮೀಣ ಭಾಗದ ಚುನಾಯಿತ ಪ್ರತಿನಿಧಿಗಳೂ ಸಹ ಅಭಿವೃದ್ಧಿ ಕಾರ್ಯಗಳಿಗೆ ಸಕ್ರಿಯವಾಗಿ ಕೈಜೋಡಿಸುತ್ತಿದ್ದಾರೆ. ಈ ರೀತಿಯ ಸಕಾರಾತ್ಮಕ ಬೆಳವಣಿಗೆಗಳನ್ನು ಸಹಿಸಿಕೊಳ್ಳಲಾಗದೆ ಕೆಲವು ಕಾಂಗ್ರೆಸ್ ಮುಖಂಡರು ಹಾಗೂ ಅವರ ಬೆಂಬಲಿಗರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಅವರು ದೂರಿದರು.

ಊಟದ ವ್ಯವಸ್ಥೆ ಕುರಿತ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ ಅವರು ಶಾಸಕರು ಅಧಿಕಾರಿಗಳನ್ನು ಹಾಗೂ ಗುತ್ತಿಗೆದಾರರನ್ನು ಬೆದರಿಸಿ ಹಣ ವಸೂಲಿ ಮಾಡಿ ಸ್ನೇಹ ಸಮ್ಮಿಲನ ಕಾರ್ಯಕ್ರಮದ ಊಟದ ವ್ಯವಸ್ಥೆ ಮಾಡಿಸಿಲ್ಲ ಸಂಪೂರ್ಣ ಶಾಸಕರು ಸ್ವಂತ ಹಣದಿಂದ ಮಾಡಿದ್ದಾರೆ. ಕಾಂಗ್ರೆಸ್ ಮುಖಂಡರು ಅನವಶ್ಯಕ ಆರೋಪ ಮಾಡುತ್ತಿರುವ ಪ್ರಶ್ನೆಗಳಿಗೆ ಸಮಯ ಬಂದಾಗ ಶಾಸಕರು ಸ್ಪಷ್ಟನೆ ನೀಡುತ್ತಾರೆ. ನಮಗೂ ಮಾಧ್ಯಮಗಳ ಮುಂದೆ ಬಂದು ಉತ್ತರಿಸುವ ಸಾಮರ್ಥ್ಯವಿದೆ ಎಂದರು.

ಪುರಸಭಾ ಮಾಜಿ ಸದಸ್ಯ ಮಂಜುನಾಥ್, ನಟೆಕೆರೆ ಮಂಜುನಾಥ್, ಚಿಕ್ಕೋಲೆ ಗ್ರಾಮದ ರಘು, ಗ್ರಾಪಂ ಮಾಜಿ ಸದಸ್ಯ ರಘು ಇದ್ದರು.

# ಮಾ.2 ರಂದು ಬೆಂಗಳೂರು ಚಲೋ




**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ದೀರ್ಘಕಾಲದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಎಐಟಿಯುಸಿ ಸಂಯೋಜಿತ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ನೇತೃತ್ವದಲ್ಲಿ ಮಾರ್ಚ್ 2 ರಂದು ಬೆಂಗಳೂರಿನ ಫ್ರೀಡಂ ಉದ್ಯಾನವನದಲ್ಲಿ ಬಜೆಟ್ ಪೂರ್ವ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಎಐಟಿಯುಸಿ ಅಧ್ಯಕ್ಷೆ ಎಸ್.ಎನ್. ಜಯಲಕ್ಷ್ಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಪ್ರತಿಭಟನಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಕಾರ್ಯಕರ್ತೆಯರು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ರಾಜ್ಯ ಸರ್ಕಾರದ ಆರನೇ ಗ್ಯಾರಂಟಿ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ 15,000 ಹಾಗೂ ಸಹಾಯಕಿಯರಿಗೆ 10,000 ಗೌರವಧನ ಹೆಚ್ಚಿಸಿ ಕೂಡಲೇ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

2011ರಿಂದ ನಿವೃತ್ತರಾದ ಹಾಗೂ ಸ್ವಯಂ ನಿವೃತ್ತಿ ಪಡೆದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಜಾರಿಗೊಳಿಸಬೇಕು ಎಂಬುದು ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ಸುದೀರ್ಘ ಸೇವೆ ಸಲ್ಲಿಸಿದ ನಂತರವೂ ನಿವೃತ್ತಿ ಭದ್ರತೆ ಇಲ್ಲದಿರುವುದು ಅನ್ಯಾಯ ಎಂದು ನೋವು ಹೊರ ಹಾಕಿದರು.

ಅಂಗನವಾಡಿ ಕೇಂದ್ರಗಳ ಜವಾಬ್ದಾರಿಗಳ ಜೊತೆಗೆ ಬಲವಂತವಾಗಿ ಬಿ.ಎಲ್.ಒ. ಕರ್ತವ್ಯವನ್ನೂ ಹೇರಲಾಗುತ್ತಿದೆ.ಇದನ್ನು ತೀವ್ರವಾಗಿ ವಿರೋಧಿಸಲಾಗಿದೆ. ಈ ಜವಾಬ್ದಾರಿ ನಿರಾಕರಿಸಿದವರ ವಿರುದ್ಧ ಅಮಾನತು ಕ್ರಮ ಕೈಗೊಳ್ಳುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ಪ್ರಾರಂಭಿಸಲು ಅವಕಾಶ ನೀಡುತ್ತಿರುವುದರಿಂದ ಅಂಗನವಾಡಿಗಳಿಗೆ ಬರುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಗುತ್ತಿದೆ.

ಇದರಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮೂಲ ಉದ್ದೇಶವೇ ಹಾಳಾಗುತ್ತಿದೆ ಎಂದು ಆರೋಪಿಸಿದರು. ಆದ್ದರಿಂದ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಿ ಇರುವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ಒತ್ತಾಯಿಸಿದರು.

ಎಐಟಿಯುಸಿ ಸಂಘಟನೆ ಗೌರವಾಧ್ಯಕ್ಷ ಎಂ.ಸಿ. ಡೋಂಗ್ರೆ, ಪ್ರಧಾನ ಕಾರ್ಯದರ್ಶಿ ವೇದಾವತಿ, ಖಜಾಂಚಿ ನಾಗರತ್ನ ಪಿ.ಡಿ. ಇದ್ದರು.

# ಅರಕಲಗೂಡಿನ ಕ್ರಿಸ್ತ ಜ್ಯೋತಿ ಶಾಲೆಯಲ್ಲಿ ಆರೋಗ್ಯ ತಪಾಸಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರಕಲಗೂಡು: ಅನಾರೋಗ್ಯ ಸಮಸ್ಯೆಗಳು ಎಲ್ಲಾ ವಯಸ್ಸಿನವರಲ್ಲಿಯು ಕಂಡುಬರುತ್ತಿದ್ದು, ಎಷ್ಟೇ ಎಚ್ಚರಿಕೆ ವಹಿಸಿದರು ಸಾಲದು. ಈ ನಿಟ್ಟಿನಲ್ಲಿ ಜಾಗರೂಕರಾಗಿರಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ತಿಳಿಸಿದರು.

ಪಟ್ಟಣದ ಕ್ರಿಸ್ತ ಜ್ಯೋತಿ ಶಾಲಾ ಆವರಣದಲ್ಲಿ ಶುಕ್ರವಾರ ತಾಲೂಕು ಆರೋಗ್ಯ ಇಲಾಖೆ, ಸಾರ್ವಜನಿಕ ಆಸ್ಪತ್ರೆ, ಹಾಸನದ ಎಂ.ಎಂ.ಮಲ್ಟಿಸ್ಪೆಸಾಲಿಟಿ ಆಸ್ಪತ್ರೆ, ಅಮ್ಮ ಕಣ್ಣಿನ ಆಸ್ಪತ್ರೆ ಹಾಗೂ ರಕ್ತ ನಿಧಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಾಲಾ ಕಾಲೇಜುಗಳಲ್ಲಿ ವಿದ್ಯೆ ಕಲಿಯುತ್ತಿರುವ ಮಕ್ಕಳ ಆರೋಗ್ಯ ತಪಾಸಣೆ ಹೆಚ್ಚು ಉತ್ತೇಜಿತವಾಗಿದೆ. ಈ ಹಂತದಲ್ಲಿ ಮಕ್ಕಳಲ್ಲಿ ಕಂಡುಬರುವ ಅನಾರೋಗ್ಯ ಸಮಸ್ಯೆಗೆ ಆರಂಭದಲ್ಲಿಯೇ ಚಿಕಿತ್ಸೆ ನೀಡಿ ಗುಣಪಡಿಸಲು ಸಹಕಾರಿಯಾಗಲಿದೆ. ಅಲ್ಲದೆ ಇಲ್ಲಿ ಹೆಚ್ಚು ವಿದ್ಯಾರ್ಥಿಗಳ ಪೋಷಕರು ತಪಾಸಣೆಗೆ ಒಳಪಡುತ್ತಿದ್ದು, ಅವರಿಗೂ ಕೂಡ ಉಪಯುಕ್ತವಾಗಿದೆ ಎಂದು ಹೇಳಿದರು.

ಮಕ್ಕಳ ತಜ್ಞ ಡಾ.ಮಂಜುನಾಥ್ ಮಾತನಾಡಿ, ಮಕ್ಕಳನ್ನು ಮೊಬೈಲ್‌ನಿಂದ ಸಂಪೂರ್ಣವಾಗಿ ದೂರ ಇಡಬೇಕಿದೆ.ಬೆಳೆಯುವ ಮಕ್ಕಳಿಗೆ ಹೆಚ್ಚು ಪೋಷಕಾಂಶಯುಕ್ತ ಆಹಾರ ಪದಾರ್ಥಗಳು ಬೇಕಿದೆ.ಇದು ಅವರ ಆರೋಗ್ಯಕರ



ಬೆಳವಣಿಗೆಗೆ ಪೂರಕವಾಗಿದೆ. ಈ ಹಂತದಲ್ಲಿ ಮೊಬೈಲ್ ಬಳಕೆಯಾದರೇ ಅವರಲ್ಲಿನ ಬುದ್ಧಿಶಕ್ತಿ ಮೇಲೆ ದುಷ್ಪರಿಣಾಮ ಬೀರಲಿದೆ. ಆದಷ್ಟು ಬೇಕರಿ, ಜಂಕ್ ಫುಡ್ ಸೇವನೆಯಿಂದ ಮಕ್ಕಳನ್ನು ದೂರ ಇಡಬೇಕಿದೆ. ಇತ್ತೀಚಿನ ವರದಿ ಪ್ರಕಾರ ಹೆಚ್ಚು ಮಕ್ಕಳ ಮನಸ್ಸಿನ ಮೇಲೆ ಡಿಜಿಟಲ್ ಮೀಡಿಯಾ ಕೆಟ್ಟಪರಿಣಾಮ ಬೀರುತ್ತಿದೆ. ಇದನ್ನು ಪೋಷಕರು ತಡೆಯದಿದ್ದರೇ ದೊಡ್ಡಪರಿಣಾಮ ಬೀರಲಿದೆ ಎಂದರು.

ಪ್ರಾಂಶುಪಾಲ ರೆ.ಫಾ.ಸೆಬಾಸ್ಟಿನ್‌ತನಾಡಿದರು. ಕೆಇಬಿ ಎಂಜಿನಿಯರ್ ನಾಗೇಶ, ವರ್ತಕ ಲೋಕೇಶ್, ಉದ್ಯಮಿ ಕುಮಾರ್ ಸೇರಿ ಅನೇಕರು ರಕ್ತದಾನ ಮಾಡಿದರು. ಶಿಬಿರದಲ್ಲಿ ಒಟ್ಟು 56 ಯೂನಿಟ್ ರಕ್ತ ಸಂಗ್ರಹ, 200 ಮಂದಿ ಕಣ್ಣಿನ ತಪಾಸಣೆ, 150 ಮಂದಿಗೆ ಮೂಳೆ ತಜ್ಞರ ಸಲಹೆ, 119 ಜನರಲ್ ತಪಾಸಣೆ, 80 ಮಂದಿ ಸ್ತ್ರೀ ರೋಗ, 230 ಮಂದಿಗೆ ರಕ್ತದ ಗುಂಪು ಹಾಗೂ 159 ಮಂದಿ ಬಿಪಿ, ಮಧುಮೇಹ ತಪಾಸಣೆಗೆ ಒಳಗಾದರು.

# ಇಂದಿನಿಂದ ಪಿಯುಸಿ ಪರೀಕ್ಷೆ: ಜಿಲ್ಲೆಯಲ್ಲಿ ಸಕಲ ಸಿದ್ಧತೆ

## 33 ಪರೀಕ್ಷಾ ಕೇಂದ್ರ | 15,782 ಪರೀಕ್ಷಾರ್ಥಿಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ಫೆ. 28 ರಿಂದ ಮಾ. 17ರ ವರೆಗೆ ನಡೆಯಲಿದ್ದು ಜಿಲ್ಲೆಯಲ್ಲಿ 33 ಪರೀಕ್ಷಾ ಕೇಂದ್ರ ತೆರೆಯಲಾಗಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಪರೀಕ್ಷೆಯ ಪಾವಿತ್ರ್ಯತೆ ಕಾಪಾಡಿಕೊಂಡು ದಕ್ಷತೆಯಿಂದ ನಡೆಸಲು ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಜಿಲ್ಲಾ ಪಂಚಾಯ್ತಿ ಹಾಗೂ ಶಿಕ್ಷಣ ಇಲಾಖೆ ಸಂಪೂರ್ಣ ಸಜ್ಜಾಗಿವೆ ಎಂದು ಹೇಳಿದರು.

ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ 14,759 ಹೊಸ ವಿದ್ಯಾರ್ಥಿಗಳು, 305 ಖಾಸಗಿ ಅಭ್ಯರ್ಥಿಗಳು, 715 ಪುನರಾವರ್ತಿತ ವಿದ್ಯಾರ್ಥಿಗಳು, ಮೂವರು ಫಲಿತಾಂಶ ಉನ್ನತೀಕರಣಕ್ಕಾಗಿ ಒಟ್ಟು 15,782 ಅಭ್ಯರ್ಥಿಗಳು ಪರೀಕ್ಷೆಗೆ



ನೋಂದಾಯಿಸಿಕೊಂಡಿದ್ದಾರೆ ಎಂದರು.

ಇವರಲ್ಲಿ 6167 ಬಾಲಕರು ಮತ್ತು 8592 ಬಾಲಕಿಯರಿದ್ದಾರೆ. ಹಾಸನ ನಗರ-12, ಆಲೂರು-01, ಅರಸೀಕೆರೆ-06, ಅರಕಲಗೂಡು-03, ಬೇಲೂರು-02, ಚನ್ನರಾಯಪಟ್ಟಣ-04, ಜಾವಗಲ್-01, ಹೊಳೆನರಸೀಪುರ-03, ಸಕಲೇಶಪುರ-01 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 33 ಪರೀಕ್ಷಾ ತೆರೆಯಲಾಗಿದೆ ಎಂದರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ.ಪ್ರದೇಶವನ್ನು ಬಿಎನ್‌ಎಸ್ 155 ರ ಅನ್ವಯ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ.

ಪ್ರತೀ ಪರೀಕ್ಷಾ ಕೇಂದ್ರದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಸಮೀಪವಿರುವ ಝೆರಾಕ್ಸ್ ಅಂಗಡಿ ಮತ್ತು ಸೈಬರ್ ಕೇಂದ್ರ ಮುಚ್ಚುವಂತೆ ಆದೇಶಿಸಲಾಗಿದೆ. ಪರೀಕ್ಷಾ ಅಕ್ರಮ ತಡೆಗಟ್ಟಲು ಹಾಗೂ ಪಾರದರ್ಶಕತೆಯಿಂದ ನಡೆಸಲು ಸಿ.ಸಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ ಎಂದರು.

ಪರೀಕ್ಷೆಗಳು ವೆಬ್ ಕಾಸ್ಟಿಂಗ್ ಕಣ್ಗಾವಲಿನಲ್ಲಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳ, ಪ್ರತೀ ಪರೀಕ್ಷಾ ಕೊಠಡಿಗಳ ಚಲನವಲನ ವೀಕ್ಷಿಸಲು ವ್ಯವಸ್ಥೆಮಾಡಲಾಗಿದೆ. ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು ತಹಸೀಲ್ದಾರ್ ,ಬಿಇಒ, ಪ್ರಾಂಶುಪಾಲರನ್ನೊಳಗೊಂಡ ಪ್ರಶ್ನೆಪತ್ರಿಕೆ ಪಾಲಕರ ತ್ರಿಸದಸ್ಯ ಸಮಿತಿ ರಚಿಸಲಾಗಿದೆ ಎಂದರು.

ಪ್ರಶ್ನೆ ಪತ್ರಿಕೆಗಳನ್ನು 10 ಮಾರ್ಗಗಳಲ್ಲಿ ವಿತರಿಸುವ ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್ ಸಿಸ್ಟಂ ಅಳವಡಿಸಲಾಗಿದೆ. ಮತ್ತು ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು.

ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಬೇರಾವುದೇ ಸಿಬ್ಬಂದಿ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ಪರೀಕ್ಷಾ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸತಕ್ಕದ್ದು ಎಂದರು.

ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಮೊಬೈಲ್, ರಿಸ್ಟ್‌ವಾಚ್, ಬ್ಲೂ ಟೂತ್, ಯಾವುದೇ ವಿದ್ಯುನ್ಮಾನ ಉಪಕರಣ ನಿಷೇಧಿಸಲಾಗಿದೆ.

ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಪರೀಕ್ಷೆಗೆ ಸಂಬಂಧಪಡದವರು ಎಕ್ಸಾಂ ಸೆಂಟರ್ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ ಎಂದರು. ತಾತ್ವಿಕ ಪರೀಕ್ಷೆಗೆ ಪ್ರತೀ ಪರೀಕ್ಷಾ ಕೇಂದ್ರಗಳಿಗೆ ಸ್ಥಾನಿಕ ಜಾಗೃತದಳ ಸದಸ್ಯರು ಮತ್ತು ತಾಲ್ಲೂಕುವಾರು ಸಂಚಾರಿ ಜಾಗೃತದಳ ಸದಸ್ಯರ ತಂಡವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ನಿಯೋಜಿಸಲಿದ್ದಾರೆ ಎಂದು ವಿವರಿಸಿದರು. ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ನೀಡಲು ಸೂಚಿಸಲಾಗಿದೆ.

# ಸಾರ್ವಜನಿಕರು ಜವಾಬ್ದಾರಿ ಪಾಲಿಸಬೇಕು: ನ್ಯಾ.ಹೇಮಾವತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಸಾರ್ವಜನಿಕರು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅರಿತುಕೊಂಡು ಪಾಲಿಸಿದರೆ ಮುಂದಿನ ಪೀಳಿಗೆಗೆ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ತಿಳಿಸಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ವಕೀಲರ ಸಂಘ ಹಾಗೂ ವಿವಿಧ ಇಲಾಖೆಗಳು ಮತ್ತು ಸಂಘ ಸಂಸ್ಥೆಗಳು ಸಂಯುಕ್ತ ಆಶ್ರಯದಲ್ಲಿ ಜೀತ ಪದ್ಧತಿ ನಿರ್ಮೂಲನೆ ದಿನಚಾರಣೆ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬರನ್ನು ಸಮಾಜದಲ್ಲಿ ಸಮಾನರಾಗಿ ಕಾಣಬೇಕು. ಎಲ್ಲರಿಗೂ ಸಮಾನತೆ ನ್ಯಾಯ, ಗೌರವ, ಸೌಲಭ್ಯಗಳು ದೊರೆಯಬೇಕು. ಗ್ರಾಮೀಣ ಭಾಗಗಳಲ್ಲಿ ಬಾಲ್ಯ ವಿವಾಹ ಹೆಚ್ಚು ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಈ ಎಲ್ಲ ಇಲಾಖೆಯ ಅಧಿಕಾರಿಗಳು ಕೈಜೋಡಿಸಬೇಕು ಎಂದು ತಿಳಿಸಿದರು.

ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ ಶೆಟ್ಟಿ ಮಾತನಾಡಿ, ಜೀತದ ಕೆಲಸ ಮಾಡುತ್ತಿದ್ದ ಮಕ್ಕಳು ಕಂಡರೆ ಅವರನ್ನು ರಕ್ಷಣೆ ಮಾಡುವುದು ಮತ್ತು ಅಂತಹ ಪ್ರಕರಣಗಳನ್ನು ಖಂಡಿಸುವುದು ಸರ್ಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕ ಕರ್ತವ್ಯ ಎಂದು ತಿಳಿಸಿದರು.

ಚಿಕ್ಕ ಮಕ್ಕಳನ್ನು ಜೀತ ಪದ್ಧತಿಗಾಗಿ ವಿದ್ಯಾಭ್ಯಾಸದಿಂದ ದೂರವಿಡುತ್ತಿದ್ದಾರೆ. ಇಂದಿಗೂ ಕೂಡ ಜೀತ ಪದ್ಧತಿ ಸಮಾಜದಲ್ಲಿ ಮುಕ್ತಗೊಂಡಿಲ್ಲ. ಅದನ್ನು ಆಚರಣೆ ಮಾಡದಂತೆ ಹೆಚ್ಚಿನ ಪ್ರಚಾರ ನೀಡಬೇಕು ಎಂದು ತಿಳಿಸಿದರು.

ಸಾರ್ವಜನಿಕರಿಗೆ ಕಾನೂನು ಜೀತ ಪದ್ಧತಿ ಅರಿವಿನ ಬಗ್ಗೆ ಮಾಹಿತಿಯನ್ನು ನೀಡುವಂತ ಕೆಲಸವನ್ನು ಕಾನೂನು ಸೇವಾ ಪ್ರಾಧಿಕಾರ ಕಾರ್ಯವನ್ನು ರಾಜ್ಯ, ಜಿಲ್ಲೆ, ತಾಲೂಕುಗಳಲ್ಲಿ ಕೈಗೊಂಡಿದೆ. ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಪ್ರತಿ ತಿಂಗಳು ಕಾನೂನು ಅರಿವು ಶಿಬಿರ ಆಯೋಜಿಸಬೇಕು ಎಂದರು.

ಪ್ರಸ್ತುತ ದಿನಗಳಲ್ಲಿ ಅಪಘಾತಗಳು ಹೆಚ್ಚಾಗಿ ಕಂಡುಬರುತ್ತಿದೆ, ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷಕ್ಕೆ 1,70.000 ಅಪಘಾತಗಳು ಸಂಭವಿಸುತ್ತಿದ್ದಾವೆ. ಅದಕ್ಕೆಲ್ಲ ಕಾರಣ ಎಂದರೆ ರಸ್ತೆ ನಿಯಮಗಳನ್ನು ಪಾಲಿಸದೆ ಇರುವುದು, ರಸ್ತೆ ನಿಯಮಗಳನ್ನು ಪಾಲಿಸಿದರೆ ಅಪಘಾತಗಳ ಸಂಖ್ಯೆ ಕಡಿಮೆ ಆಗುತ್ತದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಕೆ.ದಾಕ್ಷಾಯಿಣಿ ಮಾತನಾಡಿ, ಕುರಿತು ಮಕ್ಕಳ ತಂದೆ- ತಾಯಿಗೆ ಹಣ ನೀಡಿ ಮಕ್ಕಳನ್ನು ಸಾಲವನ್ನು ನೀಡಿ ಅವರನ್ನು ಜೀವನ ಪೂರ್ವ ಜೀತದಾಳಾಗಿ ದುಡಿಸುಕೊಳ್ಳುವುದೇ ಚಿತಪದ್ದತಿಯಾಗಿದೆ ಇದನ್ನು ಸಂಪೂರ್ಣ ತಡೆಗಟ್ಟಲು ಅಗತ್ಯವಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿ ಜೀತ ಪದ್ಧತಿ ವ್ಯವಸ್ಥೆ ಕಡಿಮೆ ಆಗಿದೆ. ಕಾಫಿ ಎಸ್ಟೇಟ್ ಗಳಲ್ಲಿ ಜೀತಕ್ಕೆ ಬಳಸಿಕೊಳ್ಳುತ್ತಿದ್ದು, ಇಂತಹ ಪ್ರಕರಣಗಳು ಕಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದರು.

ಹಿರಿಯ ವಕೀಲ ಚಂದ್ರಶೇಖರ್ ಮಾತನಾಡಿ, ಸಮಾಜದಲ್ಲಿ ಹಲವಾರು ಜನ ಸಾಲದ ಸುಳಿಗೆ ಸಿಲುಕಿ ಜೀತದಳಾಗುತ್ತಾರೆ. ಜೀತ ಪದ್ಧತಿ ಎಂಬುದು ತಲೆತಲಾಂತರದಿಂದ ಬಂದು ಒಂದು ಪದ್ಧತಿಯಾಗಿದೆ ಎಂದು ಹೇಳಿದರು.

ಕೆಲವು ಭೂಮಾಲೀಕರು ತಮ್ಮ ಭೂಮಿಯನ್ನು ದುಡಿಯುವವರಿಗೆ ನೀಡಿ ಅವರನ್ನು ಜೀತದಾಳಾಗಿ ಮಾಡಿಕೊಳ್ಳುತ್ತಾರೆ ಈ ರೀತಿಯಾದ ಜೀತ ಪದ್ಧತಿಗಳನ್ನು ಇಂದಿನ ಕಾಲದಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದವು ಮತ್ತು ಪ್ರಮಾಣದಲ್ಲಿ ಈಗಲೂ ಕೂಡ ಕಾಣಬಹುದಾಗಿದೆ. ಸಮಾಜದಲ್ಲಿ ಮೇಲು-ಕೀಳು, ಜಾತಿ ತಾರತಮ್ಯ , ಬಡತನ, ಕುಡಿತ ಚಟ, ಅನಕ್ಷರತೆ, ಸಾಲದ ಹೊರೆ, ಜೂಜಾಟ, ಇಂತಹಗಳು ಜೀತ ಪದ್ಧತಿಗೆ ಮುಖ್ಯವಾಗಿ ಕಾರಣವಾಗಿರುತ್ತವೆ ಎಂದರು.

ಜೀತ ಪದ್ಧತಿಯನ್ನು ಹೋಗಲಾಡಿಸಲು ಸರ್ಕಾರ ಕಾನೂನು ಅನೇಕ ಕಾನೂನುಗಳನ್ನು ಜಾರಿಗೆ ತಂದಿದೆ, ಸಮಾನ ವೇತನವನ್ನು ಕಲ್ಪಿಸುವುದು, ಇಲಾಖೆಗಳ ಮೂಲಕ ಸಮಾನತೆ ಮೂಡಿಸುವುದು, ಪರಿಹಾರ ವ್ಯವಸ್ಥೆಯನ್ನು ರೂಪಿಸುವುದು ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಆರ್ .ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್, ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ, ತಮ್ಮಣ್ಣಗೌಡ, ಮೋಹನ್ ರಾವ್, ಕೃಷ್ಣಮೂರ್ತಿ ಉಪಸ್ಥಿತಿರಿದ್ದರು.

# ಅಲ್ಪಸಂಖ್ಯಾತ ಸಮುದಾಯಕ್ಕೆ 15 ಸಾವಿರ ಕೋಟಿ ರೂ. ಮೀಸಲಿಡಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಹಾಗು ಅಲ್ಪಸಂಖ್ಯಾತ ಸಮುದಾಯಗಳ ಅಭಿವೃದ್ಧಿಗೆ 15 ಸಾವಿರ ಕೋಟಿ ರೂ. ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಮೀಸಲಿಡಬೇಕು ಎಂದು ಎಸ್ ಡಿಪಿಐಐ ರಾಜ್ಯ ಸಂಚಾಲಕ ಅಫ್ಸರ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್ ಮಂಡಿಸಲು ತಯಾರಿ ನಡೆಸುತ್ತಿದ್ದಾರೆ. ಹಿಂದುಳಿದ ವರ್ಗದವರ ಪರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ತಳಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಆದ್ಯತೆ ನೀಡಬೇಕು. ಹಿಂದೆ ನೀಡಿದ್ದ 134 ಆಶ್ವಾಸನೆಗಳಲ್ಲಿ ಕೇವಲ ಕೇವಲ ಶೇ.6.7 ರಷ್ಟು ಮಾತ್ರ ಅನುಷ್ಠಾನಕ್ಕೆ ಬಂದಿದೆಯೆಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ಬಜೆಟ್‌ನಲ್ಲಿ ನಿಗದಿ ಮಾಡಿದ್ದ ಅನುದಾನ, ಶೇ.55 ರಷ್ಟು ಖರ್ಚಾಗಿದೆ. ವಿವಿಧ ಇಲಾಖೆ ಅನುದಾನ ಶೇ. 100 ರಷ್ಟು ಖರ್ಚಾಗಲು ಆದ್ಯತೆ ನೀಡಬೇಕು. ಎಲ್ಲಾ ಇಲಾಖೆಗಳಲ್ಲೂ ಖಾಲಿ ಇರುವ ಸುಮಾರು 3 ಲಕ್ಷ ಖಾಲಿ ಹುದ್ದೆ ಭರ್ತಿ ಮಾಡಬೇಕೆಂದು ಆಗ್ರಹಿಸಿದರು.

# ಕೇರಳಾಪುರ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ಪುರಾಣ ಪ್ರಸಿದ್ಧ ಕೇರಳಾಪುರ ಗ್ರಾಮದ ಶ್ರೀ ಪ್ರಸನ್ನ ಶ್ರೀವೀರಭದ್ರ ಸ್ವಾಮಿಯವರ ರಥೋತ್ಸವ ಗುರುವಾರ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ರಥಕ್ಕೆ ಹೂವಿನ ಅಲಂಕಾರ, ಪೂಜಾ ಕೈಂಕರ್ಯ ನಂತರ ರಥಕ್ಕೆ ಚಾಲನೆಯನ್ನು ಮಾಜಿ ಸಚಿವರು ಹಾಗೂ ಶಾಸಕರು ಎ. ಮಂಜು, ತಹಸಿಲ್ದಾರ್ ಕೆ.ಸಿ.ಸೌಮ್ಯ ನೀಡಿದರು.

ರಥೋತ್ಸವದ ಅಂಗವಾಗಿ ದೇಗುಲವು ವಿವಿಧ ರೀತಿಯ ಹೂಗಳಿಂದ ಅಲಂಕೃತಗೊಂಡಿತ್ತು. ಹಗಲು 11 ಗಂಟೆಗೆ ಸರಿಯಾಗಿ ದೇಗುಲದ ಮುಂಭಾಗದಲ್ಲಿ ನಿಲ್ಲಿಸಿ ವಿವಿಧ ಪುಷ್ಪಗಳಿಂದ ಹಾಗೂ ಬಗ್ಗೆ ಬಗೆಯ ವರ್ಣದ ಬಟ್ಟೆಗಳಿಂದ ಅಲಂಕರಿಸಿದ 25 ಅಡಿ ಎತ್ತರದ ರಥದಲ್ಲಿ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ, ಪೂಜಾ ಕೈಂಕರ್ಯ ನೆರವೇರಿಸಿದರು.


ಸುತ್ತಮುತ್ತಲಿನ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಭಕ್ತರ ಸಮಯದಲ್ಲಿ ಮಂಗಳ ವಾದ್ಯಗಳೊಂದಿಗೆ ಹರ್ಷೋದ್ಗಾರದೊಂದಿಗೆ ಸಾಮೂಹಿಕವಾಗಿ ರಥವನ್ನು ಎಳೆಯುತ್ತಾ ದೇವಸ್ಥಾನದ ಮುಂಭಾಗದಿಂದ ರಥದ ಬೀದಿಯಲ್ಲಿ ತೆರಳಿ ಅಲ್ಲಿಂದ ಮತ್ತೆ ಶ್ರೀ ವೀರಭದ್ರಸ್ವಾಮಿ ದೇವಾಲಯದ ಸುತ್ತ ಪ್ರದಕ್ಷಣೆ ನಂತರ ಸ್ವಸ್ಥಾನಕ್ಕೆ ರಥವನ್ನು ಎಳೆದು ತಂದು ನಿಲ್ಲಿಸಿದರು.

ವಿವಿಧ ಪೂಜೆ, ಧಾರ್ಮಿಕ ಸೇವಾ ಕಾರ್ಯಗಳು ಜರುಗಿದವು. ರಥೋತ್ಸವ ಮತ್ತು ಮಹಾಮಂಗಳಾರತಿ ನಂತರ ಬಂದಂತಹ ಸಾವಿರಾರು ಭಕ್ತರು ಪ್ರಸಾದದ ವ್ಯವಸ್ಥೆಯನ್ನು ದೇವಾಲಯದ ಸಮಿತಿಯವರು ವ್ಯವಸ್ಥೆ ಮಾಡಿದ್ದರು.

ಪುರೋಹಿತರಾದ ರವಿ, ಮಂಜುನಾಥ್, ಪರಮೇಶ್, ಭರತ್, ಮಹದೇವ ಮುಂತಾದವರು ಭಾಗವಹಿಸಿದ್ದರು.

# ಅನ್ಯ ವ್ಯಕ್ತಿಗೆ ಭೂಪರಿಹಾರ: ಸಂತ್ರಸ್ತರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಯಗಚಿ ಜಲಾಶಯ ಯೋಜನೆ ಕಾಮಗಾರಿಗೆ ವಶಪಡಿಸಿಕೊಂಡಿದ್ದ ಭೂಮಿಯ ಮೂಲ ವಾರಸುದಾರರಿಗೆ ಪರಿಹಾರ ನೀಡುವ ಬದಲಾಗಿ ಸಂಬಂಧವಿಲ್ಲದ ಮಂಜುನಾಥ ಎಂಬ ವ್ಯಕ್ತಿಗೆ ಪರಿಹಾರದ ಹಣ ಮಂಜೂರು ಮಾಡಿರುವುದನ್ನು ಖಂಡಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಭೀಮ್ ಆರ್ಮಿ ಕರ್ನಾಟಕ ಏಕತಾ ಮಿಷನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸಂಘಟನೆ ಜಿಲ್ಲಾಧ್ಯಕ್ಷ ಪ್ರದೀಪ್ ಮಾತನಾಡಿ, ತಾಲೂಕಿನ ಕಟ್ಟಾಯ ಗ್ರಾಮದ ಸರ್ವೆ ನಂ. 128/1ಎ ರಲ್ಲಿ ಯಗಚಿ ಜಲಾಶಯ ಯೋಜನೆ ಕಾಮಗಾರಿಗಾಗಿ ಪ್ರೇಮ ಎಂಬುವರ ಸುಮಾರು 2 ಎಕರೆ ಜಮೀನು, ಪಿತ್ರಾರ್ಜಿತ ಆಸ್ತಿಯಾಗಿದ್ದು, ಈ ಜಾಗವನ್ನು ಯಗಚಿ ಜಲಾಶಯ ಯೋಜನೆಯ ನಾಲೆಗಾಗಿ ವಶಪಡಿಸಿಕೊಳ್ಳಲಾಗಿತ್ತು. ಆದರೆ, ಪರಿಹಾರವನ್ನು ಬೇರೆ ವ್ಯಕ್ತಿಗೆ ನೀಡಿದ್ದಾರೆ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರ ಹಾಕಿದರು.

ವಿಶೇಷ ಭೂಸ್ವಾಧೀನಾಧಿಕಾರಿ ನಿರ್ಲಕ್ಷ್ಯದಿಂದ ಈ ಲೋಪ ನಡೆದಿದೆ. ಸ್ಥಳಕ್ಕೆ ಭೇಟಿ ನೀಡಿ ಯಾರು ಉಳುಮೆ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ ಬಳಿಕ ಸರಿಯಾದ ಭೂ ಮಾಲೀಕರಿಗೆ ಪರಿಹಾರ ವಿತರಣೆ ಮಾಡಬೇಕಿತ್ತು ಎಂದರು.

ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ ಬೇರೆಯವರ ಖಾತೆಗೆ ಜಮಾ ಆಗಿರುವ ಪರಿಹಾರದ ಹಣವನ್ನು ಬಡ್ಡಿ ಸಮೇತ ಹಿಂಪಡೆದು ಮೂಲ ವಾರಸುದಾರರಿಗೆ ನೀಡಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ತೆರೆದಿರುವ ನಾಲೆ ಮುಚ್ಚಿ ನಮ್ಮ ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

# ಗುಣಮಟ್ಟದ ಬಿತ್ತನೆ ಆಲೂಗಡ್ಡೆ ವಿತರಣೆಗೆ ಕ್ರಮ ವಹಿಸಿ

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸಲಹೆ ಗಾಂಧಿ ಭವನದಲ್ಲಿ ಚರ್ಚಾಗೋಷ್ಠಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ರೈತರಿಗೆ ಆಡಳಿತಾತ್ಮಕ, ಭಾವನಾತ್ಮಕ ತಾಂತ್ರಿಕವಾಗಿ ವರ್ತಕರೇ ಸಹಾಯ ಮಾಡುವ ಜೊತೆಗೆ ಗುಣಮಟ್ಟದ ಬೀಜಗಳನ್ನು ರೈತರಿಗೆ ನೀಡುವ ಮೂಲಕ ಜೀವನವನ್ನು ಸುಧಾರಿಸುವ ಭರವಸೆ ನೀಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಮುಂಗಾರು ಹಂಗಾಮಿನ ಆಲೂಗಡ್ಡೆ ಬೆಳೆಗೆ ಸಂಬಂಧಿಸಿದಂತೆ ಆಯೋಜಿಸಿದ್ದ ಚರ್ಚಾಗೋಷ್ಠಿಯಲ್ಲಿ ಮಾತನಾಡಿ, ಹಿಂದೆ ಹಾಸನ ಜಿಲ್ಲೆ ಎಂದರೆ ಆಲೂಗಡ್ಡೆ ಎಂಬ ಹೆಸರು ಇತ್ತು ಆದರೆ ಇಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯುವ ರೈತರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿರುತ್ತಿದೆ. ಉತ್ತಮವಾದ ಗುಣಮಟ್ಟದ ಬಿತ್ತನೆ ಆಲೂಗಡ್ಡೆಯನ್ನು ನೀಡಬೇಕು. ರೈತರು ಬೆಳೆಯನ್ನೇ ನಂಬಿಕೊಂಡು ಜೀವನ ನಡೆಸುತ್ತಿರುತ್ತಾರೆ ಎಂದರು.

ಮುಂಗಾರು ಹಂಗಾಮಿನ ಬಿತ್ತನೆಗೆ ಆಲೂಗಡ್ಡೆ ಮಾರಾಟ ಮಾಡುವ ಎಲ್ಲಾ ವರ್ತಕರು, ಏಜೆನ್ಸಿಗಳಲ್ಲಿ ಕಡ್ಡಾಯವಾಗಿ ನೋಂದಣಿಯಾಗಬೇಕು. ವರ್ತಕರು ಮಾರಾಟ ಮಾಡುವ ಆಲೂಗಡ್ಡೆಯನ್ನು ಪಂಜಾಬ್‌ನ ಯಾವ ತಾಕಿನಿಂದ ಖರೀದಿಸಲಾಗಿದೆ, ಯಾವ ಗುಣಮಟ್ಟದ್ದು, ಪರಿಶೀಲನೆಯ ಆಗಿದೆಯೆ ಇಲ್ಲವೆ ಎಂಬ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು. ವರ್ತಕರು ದೃಢಿಕೃತ ಬಿತ್ತನೆ ಬೀಜಗಳನ್ನು ಮಾತ್ರ ಮಾರಾಟ ಮಾಡಬೇಕು, ಖರೀದಿ ಚೀಟಿಯಲ್ಲಿ ಬಿತ್ತನೆಗೆ ಬಳಸುವ ಆಲೂಗಡ್ಡೆ ಎಂದು ಕಡ್ಡಾಯವಾಗಿ ನಮೂದು ಮಾಡಿಯೇ ಮಾರಾಟ ಮಾಡಬೇಕು. ತೋಟಗಾರಿಕೆ ಇಲಾಖೆ ವತಿಯಿಂದ ರೈತರ ನಿಯೋಗವನ್ನು ರಚಿಸಿ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ಆಯ್ಕೆ, ಖರೀದಿ, ಸಾಗಾಣಿಕೆ, ಶೇಖರಣೆ, ಮಾರಾಟ ಈ ಎಲ್ಲಾ ಹಂತಗಳ ಮೇಲ್ವಿಚಾರಣೆಗೆ ಅಧಿಕಾರಿಗಳ ತಂಡಗಳನ್ನು ರಚಿಸಬೇಕು ಹಾಗೂ ತಂಡಗಳಲ್ಲಿ ಕಡ್ಡಾಯವಾಗಿ ರೈತ ಪ್ರತಿನಿಧಿಗಳು ಇರಬೇಕು ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯಿಂದ ಬಿತ್ತನೆ ಮಾಡಲು ಲಭ್ಯವಿರುವ ತಳಿಗಳ ವಿವರ, ಬಿತ್ತನೆ ಬೀಜಗಳನ್ನು ಮಾರಾಟ ಮಾಡಲು ನೋಂದಣಿಯಾಗಿರುವ ವರ್ತಕರ ವಿವರ. ವರ್ತಕರವಾರು ಲಭ್ಯವಿರುವ ತಳಿಗಳ ವಿವರ, ಆಲೂಗಡ್ಡೆ ಬೇಸಾಯದ ವಿವಿಧ ಹಂತಗಳಲ್ಲಿ ಬೆಳೆಗೆ ತಗುಲುವ ರೋಗ ಕೀಟ ನಿಯಂತ್ರಣೆಗೆ ಉಪಯೋಗಿಸಬೇಕಾದ ಸಸ್ಯ ಸಂರಕ್ಷಣಾ ಔಷಧಗಳ ಬಗ್ಗೆ ಮಾಹಿತಿ ಹಾಗೂ ಈ ಸಸ್ಯ ಸಂರಕ್ಷಣಾ ಔಷಧಿಗಳು ಲಭ್ಯವಿರುವ ವ್ಯಾಪಾರಿಗಳ/ಕಂಪನಿಗಳ ವಿವರಗಳನ್ನೊಳಗೊಂಡ ಆದೇಶ/ ಅಧಿಸೂಚನೆ ಹೊರಡಿಸಿ ಪ್ರಚಾರ ಕೈಗೊಳುವಂತೆ ತಿಳಿಸಿದರು.

ಆಲೂಗಡ್ಡೆ ದಾಸ್ತಾನು ಮಾಡಲು ಹೋಬಳಿಗೊಂದು ಶೈತ್ಯಾಗಾರವನ್ನು ಸ್ಥಾಪಿಸಲು ಇಲಾಖೆ ವತಿಯಿಂದ ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು. ಆಲೂಗಡ್ಡೆ ಬೆಳೆಗೆ ಅವಶ್ಯಕತೆ ಇರುವ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ರೈತರಿಗೆ ಬಿತ್ತನೆ ಬೀಜ ಖರೀದಿಸುವ ಸಮಯದಲ್ಲೇ ವಿತರಿಸಲು ತೋಟಗಾರಿಕೆ ಇಲಾಖೆ ವತಿಯಿಂದ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಯೋಗೇಶ್, ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್, ತೋಟಗಾರಿಕೆ ಇಲಾಖೆ ಸೋಮನಹಳ್ಳಿ ಕಾವಲು ನಟರಾಜ್ ಇತರರಿದ್ದರು.

# ಅರಕೆರೆಯಲ್ಲಿ ಕರಿಯಮ್ಮ ದೇವಿ ರಥೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಅರಕೆರೆ ಗ್ರಾಮದಲ್ಲಿ ಶುಕ್ರವಾರ ಶ್ರೀ ಕರಿಯಮ್ಮ ದೇವಿ ರಥೋತ್ಸವ ಸಂಭ್ರಮದಿಂದ ನೆರವೇರಿತು. ಕಳೆದ ಒಂದು ವಾರದಿಂದ ಗ್ರಾಮ ದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಗ್ರಾಮ ದೇವತೆಗೆ ಮದುವಣಿಗೆ ಶಾಸ್ತ್ರ, ಬೇವಿನ ಸೀರೆ ಸಮರ್ಪಣೆ, ಕಂಕುಮಾರ್ಚನೆ ಸೇರಿ ವೈಭವಯುತ ಪೂಜಾ ವಿಧಿಗಳು ಭಕ್ತರ ಸಮ್ಮುಖದಲ್ಲಿ ಜರುಗಿದವು. ಮಕ್ಕಳ ಸಿಡಿ ಉತ್ಸವ ಜಾತ್ರೆಯ ವಿಶೇಷ ಆಕರ್ಷಣೆಯಾಗಿತ್ತು. ಸುತ್ತಮುತ್ತಲಿನ ಹಳ್ಳಿಗಳಿಂದ ನೂರಾರು ಜನರು ಮಹೋತ್ಸವದಲ್ಲಿ ಭಾಗಿಯಾದರು. ರಥೋತ್ಸವದಲ್ಲಿ ಗ್ರಾಮ ದೇವತೆಗೆ ಬೇತಾಳ ಸ್ವಾಮಿ, ಮಸಿಯಂತರಾಯ, ಕೆಂಚಪ್ಪ ಹಾಗು ಭೂತಪ್ಪ ದೇವರುಗಳ ಉತ್ಸವ ನಡೆಯಿತು.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-28

**1983:** ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ ಮಹನೀಯರನ್ನು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

**1999:** ಮೈಸೂರು ನಗರದಲ್ಲಿ ರಾಜ್ಯ ಮಟ್ಟದ ವಿಜ್ಞಾನ ಮೇಳವನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿತು.

**ಜನನ**

**1928:** ಕನ್ನಡದ ಪ್ರಸಿದ್ಧ ಕವಿ ನಿಸಾರ್ ಅಹ್ಮದ್


**1953:** ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

**ಮರಣ**

**2010:** ಎಸ್.ಎನ್.ಲಕ್ಷ್ಮಿನಾರಾಯಣ ಭಟ್, ಕನ್ನಡ ಸಾಹಿತ್ಯ ಕ್ಷೇತ್ರದ ಪ್ರಮುಖ ಪಂಡಿತರು

# ಮಾನಸಿಕ ಒತ್ತಡ, ಪರಿಣಾಮ ಮತ್ತು ನಿಯಂತ್ರಣ ಕ್ರಮಗಳು

**- ಎನ್.ಆರ್. ಪ್ರಶಾಂತ್, ಆಪ್ತ ಸಲಹಾ ಮನಃಶಾಸ್ತ್ರಜ್ಞರು,**
**ಮೊ: 9481545719**



ಮನಃಏವ ಮನುಷ್ಯಾನಾಂಕಾರಣಂ ಬಂಧ ಮೋಕ್ಷಯೋಃ ಎಂಬಂತೆ ಮನುಷ್ಯನ ಸುಖ ದುಃಖಗಳಿಗೆ ಮನಸ್ಸೇ ಮೂಲ ಕಾರಣ ಎಂಬ ಸತ್ಯವುಅರಿವಾಗುತ್ತದೆ. ಮಾನಸಿಕ ಆರೋಗ್ಯ ನಮ್ಮ ದೇಹದ ಮೇಲೆ ಪರಿಣಾಮವನ್ನು ಬೀರುತ್ತದೆ. ಪ್ರಸ್ತುತ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಾವೆಲ್ಲರೂ ಯಂತ್ರ ಮಾನವರಾಗುತ್ತಿದ್ದೇವೆ. ಹಲವಾರು ಒತ್ತಡಗಳಿಂದ ಬಳಲುತ್ತಿದ್ದೇವೆ. ಮನೆಯ ವಾತಾವರಣವಾಗಲಿ, ಕೆಲಸ ಮಾಡುವ ಪರಿಸರವಾಗಲಿ, ಪ್ರಯಾಣ ಮಾಡುವಾಗ ಅಥವಾ ಧಾರ್ಮಿಕ ಕಾರ್ಯಕ್ರಮಗಳಾಗಲಿ, ಎಲ್ಲವನ್ನೂ ಒತ್ತಡಗಳಿಗೆ ಒಳಗಾಗಿ ಮಾಡಬೇಕಾಗುತ್ತದೆ. ಅದರಲ್ಲು ಬೆಳಿಗ್ಗೆ ಮನೆ ಬಿಟ್ಟರೆ, ಸಾಯಂಕಾಲ ಕ್ಷೇಮವಾಗಿ ವಾಪಾಸಾಗುವ ಭರವಸೆ ಇರುವುದಿಲ್ಲ. ಜಾತಿ-ಕಲಹ, ಕೋಮು ಗಲಭೆ, ವಿವಿಧ ಕಾರ್ಖಾನೆಗಳ ನೌಕರರ ಚಳವಳಿ, ರಸ್ತೆ ತಡೆ ಹೀಗೆ ಹಲವಾರುಒತ್ತಡಕ್ಕೆ ಒಳಗಾಗಿ ಮನೋಕ್ಷೋಭೆಗೆ ತುತ್ತಾಗಬೇಕಾಗುತ್ತದೆ. ಈ ಒತ್ತಡದ ಜೀವನದಲ್ಲಿ ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವುದು ಅವಶ್ಯಕ.

ಸ್ಟ್ರೆಸ್ ಅಥವಾ ಒತ್ತಡವನ್ನು, ಪರಿಸರದಲ್ಲಿನ ಹೆಚ್ಚಿನ ಬೇಡಿಕೆಗೆ ಪ್ರತಿಕ್ರಿಯಿಸಲು, ಮನುಷ್ಯನ ಮನಸ್ಸು ಹಾಗು ದೇಹ ಸಿದ್ಧವಾಗುವ ಸ್ಥಿತಿ ಎಂದು ಹೇಳಬಹುದು.

ನಾಗರಿಕತೆಯು ಬೆಳೆಯುತ್ತಿದ್ದ ಹಾಗೆ ತೀವ್ರತರವಾಗಿ ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ಅವಶ್ಯಕತೆಯ ಪರಿಣಾಮದಿಂದ ನಮ್ಮ ಒತ್ತಡಗಳು ಹೆಚ್ಚಾಗುತ್ತಲೇ ಇವೆ. ಇದನ್ನು ನಾವು ಮನೋವೈಜ್ಞಾನಿಕವಾಗಿ ಸ್ಟ್ರೆಸ್ ಅಂಡ್ ಸ್ಟ್ರೈನ್ ಎಂದು ಕರೆಯುತ್ತೇವೆ. ಎಲ್ಲ ರಾಷ್ಟ್ರಗಳೂ, ಎಲ್ಲಾ ಜನಾಂಗಗಳು ತಾವು ಬೆಳೆಯುತ್ತಾ ಹೋದ ಹಾಗೆ ಅನುಭವಿಸಲೇ ಬೇಕಾದ ಈ ಒತ್ತಡ ಎಂಬ ವ್ಯಾದಿಯೊಂದಿಗೆ ಹೊಂದಿಕೊಂಡು ಹೋಗುವುದೇ ಒಂದು ಸವಾಲಾಗಿದೆ.

ಮನೋವೈಜ್ಞಾನಿಕವಾಗಿ ಸ್ವಲ್ಪ ಮಟ್ಟಿನ ಒತ್ತಡ ಅವಶ್ಯಕವಾಗಿರುತ್ತದೆ. ಇದು ನಮ್ಮ ಕೆಲಸ ಕಾರ್ಯಗಳ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ, ಪೂರ್ಣವಾಗಿ ನಮ್ಮನ್ನು ನಾವು ಕೆಲಸದಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗಿರುತ್ತದೆ. ಆದರೆ ಮಿತಿ ಮೀರಿದ ಒತ್ತಡ ನಮ್ಮ ಕಾರ್ಯದಕ್ಷತೆಯನ್ನು ಕುಗ್ಗಿಸಿ, ನಾವು ನಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಂಡು ಹೋಗಲು ಅಡ್ಡಿಯನ್ನುಂಟು ಮಾಡುತ್ತದೆ.

ಯಾವುದೇ ವಿಷಯವಿರಲಿ, ಒತ್ತಡಕ್ಕೆ ಪ್ರತಿಕ್ರಿಯಿಸಬೇಕಾದ ಸ್ಥಿತಿ, ದಿನ ಕಳೆಯುತ್ತಾ ಹೆಚ್ಚುತ್ತಲೇ ಹೋಗುವುದರಿಂದ ಇದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಹೋಗಿದೆ. ಪರಿಸರದಲ್ಲಿನ ಬದಲಾವಣೆ ಹಿತಕಾರಿಯಾಗಿರಲಿ ಅಥವಾ ಅಹಿತಕಾರಿಯಾಗಿರಲಿ, ಹೊರಗಿನ ಪರಿಸರದ ಒತ್ತಡ, ಮನಸ್ಸಿನಲ್ಲಿ ಆತಂಕ, ಅಧೈರ್ಯ, ಅಭದ್ರತೆ ಮೂಡಿಸಬಹುದು. ಇದನ್ನು ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವಕ್ಕನುಗುಣವಾಗಿ ಎದುರಿಸುತ್ತಾ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವರು ಮದ್ಯವ್ಯಸನಿಗಳಾಗಬಹುದು ಮತ್ತೆ ಕೆಲವರು ಧೂಮಪಾನಕ್ಕೆ ಮೊರೆ ಹೋಗಬಹುದು. ಹೆಂಡತಿ, ಮಕ್ಕಳನ್ನು ದಂಡಿಸಬಹುದುಅಥವಾ ಅತಿಯಾದ ಧಾರ್ಮಿಕ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬಹುದು. ಇಲ್ಲವೇ ಕಳ್ಳತನ, ಸುಳ್ಳು ಹೇಳುವಿಕೆ, ಅನಾಚಾರ, ಅತ್ಯಾಚಾರಗಳಲ್ಲಿ, ತೊಡಗಿತನ್ನ ಮಾನಸಿಕ ಆಕ್ರೋಶಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬಹುದು.

ಒತ್ತಡಗಳು ಸಾಮಾನ್ಯವಾಗಿ ಕಾಣಿಕೊಳ್ಳುವ ಸಂದರ್ಭ-ಸನ್ನಿವೇಶಗಳೆಂದರೆ, ಮನೆಯಲ್ಲಿ ಅತ್ತೆ-ಸೊಸೆ ಜಗಳ, ಗಂಡ-ಹೆಂಡತಿಯ ನಡುವಿನ ಭಾವನಾತ್ಮಕ ಸಂಪರ್ಕದ ಕೊರತೆ, ಗೊಂದಲದ ವಾತಾವರಣ, ಹೆಚ್ಚಿನ ವಾಹನ ಸಂಚಾರ, ದೈಹಿಕ ಕಾಯಿಲೆಗಳು, ನಿರುದ್ಯೋಗ, ನಿರಾಶೆಯ ಪರಿಸರ, ಬಾಹ್ಯ ಪರಿಸರದ ಹಾಗು ಆಂತರಿಕ ಬೇಡಿಕೆಗಳು.

ಜೀವನ ಶೈಲಿಯಲ್ಲಿ ತೀವ್ರತರವಾದ ಬದಲಾವಣೆಗಳು, ಗುಂಪಿನಲ್ಲಿ ಹೊಂದಿಕೊಳ್ಳುವ ಸಾಮರ್ಥ್ಯ ಇಲ್ಲದಿರುವುದು, ಅಂಗವೈಕಲ್ಯ, ಇತ್ಯಾದಿಗಳೇ ಅಲ್ಲದೆ ಸುಧಾರಣೆಯಾಗದ ಆರ್ಥಿಕ ಪರಿಸ್ಥಿತಿ, ಕೆಲಸದಲ್ಲಿ ನಿರಾಸಕ್ತಿ, ಸವಾಲುಗಳನ್ನು ಎದುರಿಸಿ ಕೆಲಸ ಮಾಡುವ ಅವಕಾಶಗಳ ಕೊರತೆ, ತುಂಬಾ ಹೆಚ್ಚು ಅಥವಾ ತುಂಬಾ ಕಡಿಮೆ ಕೆಲಸದ ಸಮಯ, ಅತಿ ಹೆಚ್ಚು ವಿರಾಮ, ಅದನ್ನು ಕಳೆಯಲು ದುಶ್ಚಟಗಳಿಗೆ ಮೊರೆ ಹೋಗಬೇಕಾದ ಸಂದರ್ಭಗಳು.

ಸಂತೋಷಕರ ಸಂಗತಿಗಳಾದ ಮಗುವಿನ ಜನನ, ತಂದೆ-ತಾಯಿಗೆ ಮಕ್ಕಳನ್ನು ಶಾಲೆಗೆ ಸೇರಿಸುವ ಸಂದರ್ಭ, ವಿದ್ಯಾರ್ಥಿಗಳಿಗೆ, ಹೆಚ್ಚಿನ ಅಂಕಗಳನ್ನುಗಳಿಸಿಯೂ ವೃತ್ತಿಶಿಕ್ಷಣಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋಎನ್ನುವ ಅನಿಶ್ಚಿತ ಪರಿಸ್ಥಿತಿ, ಇತ್ತೀಚಿನ ದಿನಗಳಲ್ಲಿ ಸೆಕೆಂಡ್‌ಇಯರ್ ಪಿ.ಯು.ಸಿ. ವಿದ್ಯಾರ್ಥಿಗಳು ತಂದೆ-ತಾಯಿಯ ಆಶೋತ್ತರಗಳನ್ನು ಈಡೇರಿಸುವ ಸಲುವಾಗಿ ಟ್ಯೂಷನ್ ಹಾಗು ಕಾಲೇಜಿಗೆಂದು ಬೆಳಿಗ್ಗೆಯಿಂದ ರಾತ್ರಿಯ ವರೆಗೆ ಮನೆಯಿಂದ ಹೊರಗೆ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವೆಲ್ಲವೂ ಒತ್ತಡವನ್ನುಂಟು ಮಾಡುವಂತಹವುಗಳಾಗಿವೆ. ಮಾನಸಿಕ ಒತ್ತಡ ಹೆಚ್ಚಾದಾಗ, ಹಲವಾರು ಮನೋದೈಹಿಕರೋಗ ಚಿಹ್ನೆಗಳು ಕಾಣಿಸಿಕೊಳ್ಳಬಹುದು. ಮೈಗ್ರೇನ್, ಏಕಾಗ್ರತೆಯಕೊರತೆ, ನಿದ್ರಾಹೀನತೆ, ಅತಿಭಯ, ಗೀಳು-ಚಟ,(ಅಬ್ಸಿಸಿವ್-ಕಂಪಲ್ಸಿವ್), ಅಜೀರ್ಣ, ಮಲಬದ್ಧತೆ, ಸಿಟ್ಟು, ಸಿಡುಕು, ಕತ್ತು ಹಾಗು ಬೆನ್ನಿನಲ್ಲಿ ನೋವು, ಇತ್ಯಾದಿಗಳು.

ಒತ್ತಡವನ್ನು ನಿಯಂತ್ರಣದಲ್ಲಿಡಲು ತೆಗೆದುಕೊಳ್ಳಬೇಕಾದ ಕ್ರಮಗಳೆಂದರೆ:

ದೈಹಿಕ ಆರೋಗ್ಯದ ಬಗ್ಗೆ ಗಮನವೀಯುವುದು

ಪ್ರತಿದಿನ ವ್ಯಾಯಾಮ, ಗುಂಪಿನ ಆಟಗಳಲ್ಲಿ ಭಾಗವಹಿಸುವುದು

ಉತ್ತಮ ಆಹಾರ ಸೇವನೆ, ಉಪ್ಪು ಹಾಗು ಸಕ್ಕರೆಯ ನಿಯಮಿತ ಬಳಕೆ

ಧೂಮಪಾನ, ಮದ್ಯಸೇವನೆಯನ್ನು ಬಿಡುವುದು ಇದರಿಂದ ಸಿಗುವ ಮನಃಶಾಂತಿತಾತ್ಕಾಲಿಕವಾದುದು. (ಇವುಗಳ ಸೇವನೆಯಿಂದ ಪೂರ್ಣ ಮನಃಶಾಂತಿ ಸಿಗುತ್ತದೆ ಎಂಬುದು ಭ್ರಮೆ)

ಸಮಯಕ್ಕೆ ಸರಿಯಾಗಿಆಹಾರ ಸೇವನೆ ಹಾಗು ಕಣ್ಣುತುಂಬಾ ನಿದ್ರೆ

ಕೆಲಸದಲ್ಲಿ ಮನೋರಂಜನೆ ಕಂಡುಕೊಳ್ಳುವ ಮನೋಭಾವ ಬೆಳೆಸಿಕೊಳ್ಳುವುದು

ಮೇಲಧಿಕಾರಿಗಳು ಹಾಗು ಸಹವರ್ತಿಗಳೊಂದಿಗೆ ಸೌಹಾರ್ದಯುತ ಸಂಬಂಧ. ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವ ಮನೋಭಾವವನ್ನು ಬಿಡುವುದು. ಆತ್ಮವಿಶ್ವಾಸ ಬೆಳೆಸಿಕೊಳ್ಳುವದು, ಯಾರಲ್ಲಿ ನಂಬಿಕೆಯಿರುತ್ತದೆಯೋ ಅವರೊಡನೆ ಸಮಸ್ಯೆಯನ್ನು ಚರ್ಚಿಸುವುದು. ವಾಕಿಂಗ್ ಹೋಗುವುದು, ತೋಟಗಾರಿಕೆ, ಚಿತ್ರಕಲೆ, ಸಂಗೀತ, ಮುಂತಾದ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು. ಜಾಕಬ್‌ಸನ್ ಪ್ರೊಗ್ರೆಸಿವ್ ರಿಲ್ಯಾಕ್ಸೇಷನ್, ಇತ್ಯಾದಿಗಳು ಒತ್ತಡವನ್ನುಎದುರಿಸಲು ಸಹಾಯಕವಾಗುತ್ತವೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248